SE – 243

**Second Semester B.Com. Degree Examination, September 2020**
**(CBCS) (Fresh + Repeaters) (2014-15 and Onwards)**
**COMMERCE**
**Paper – 2.3 : Advanced Financial Accounting**

Time : 3 Hours

Max. Marks : 70

***Instruction*** : *Answer should be written* ***completely in English*** *or in* ***Kannada.***

SECTION – A

Answer **any 5** sub-questions. **Each** sub-question carries **2** marks. **(5×2=10)**

1. a) When does average clause is applicable ?

   b) What is del-credere commission ?

   c) Mention any two differences between a joint venture and a partnership.

   d) What do you mean by loaded price ?

   e) What are abnormal line of goods ?

   f) What are departmental accounts.

   g) Goods are involved at a profit at 20% on sales. The cost price of goods sent is Rs. 1,50,000. Calculate the load to be included to the cost price of good sent.

SECTION – B

Answer **any three** questions. **Each** question carries **6** marks. **(3×6=18)**

2. A fire occurred in the premises of Bangalore Sports House on 30-9-2018. From the following particulars ascertain the claim to be lodged. The last accounts of the company were prepared on 31-12-2017.

   Stock on 31-12-2017 Rs. 1,20,000

   Sundry debtors on 31-12-2017 Rs. 3,20,000

   Sundry debtors on 30-9-2018 Rs. 2,40,000

   Cash received from debtors Rs. 12,00,000

   Purchases from 1-1-2018 to 30-9-2018 Rs. 10,00,000

   Rate of gross profit on sales 25%.

KGF - 563 122

**P.T.O.**

3. Ravi of Bangalore consigned 1000 kgs of oil at Rs. 60 per kg to Srikanth of Mysore. He incurred Rs. 10,000 for carriage and freight. Srikanth incurred Rs. 2,000 as unloading charges, Rs. 4,000 as godown rent and Rs. 3,000 as selling expenses. Normal loss in weight is 80 kgs. (leakage) in transit. Srikanth sold 680 kgs. of oil at Rs. 100 per kg. Find out the value of unsold stock.

4. A and B entered into Joint Venture having profit sharing ratio of 2 : 1. They agreed to write books of accounts under memorandum joint venture method. A and B purchased goods for Rs. 6,60,000 and Rs. 4,60,000 respectively and sold the same for Rs. 7,60,000 and Rs. 5,40,000 respectively. Selling expenses incurred by them were Rs. 25,000 and Rs. 15,000 respectively. Final settlement is done by cheque. Show A's A/c and Memorandum Joint Venture A/c in the books of B.

5. A Ltd. with its H.O. in Bombay has a branch at Mysore. You are given the following particulars relating to Mysore branch for the year ended 31-3-2019.

| | | Rs. |
|---|---|---|
| Stock on 1-4-2018 | | 50,000 |
| Petty cash at branch 1-4-2018 | | 200 |
| Goods sent to branch | | 66,000 |
| Goods returned by the branch | | 5,600 |
| Cash sales at branch | | 1,20,000 |
| Cash sent to branch for expenses : | | |
| Salaries | 18,000 | |
| Rent | 4,000 | |
| Petty cash | 3,000 | 25,000 |
| Stock at branch on 31-3-2019 | | 54,000 |
| Petty cash at branch on 31-3-2019 | | 600 |

Prepare branch account in the books of H.O.

SRI BHAGWAN MAHAVEER JAIN FIRST GRADE COLLEGE KGF - 563 122

6. A firm has two departments A and B. The following information related to the trading period ending 31-3-2018.

| | A Rs. | B Rs. | Total Rs. |
|---|---|---|---|
| Opening stock | 6,000 | 9,000 | 15,000 |
| Purchases | 40,000 | 50,000 | 90,000 |
| Sales | 80,000 | 1,00,000 | 1,80,000 |
| Carriage inwards | – | – | 4,000 |
| Power | – | – | 6,000 |
| Wages | – | – | 12,000 |
| Closing stock | 6,000 | 14,000 | 20,000 |

Wages are to be allocated in the ratio 5 : 4 and power in the ratio 1:2 to the department A and B respectively. Prepare departmental trading account in the columnar form.

## SECTION – C

Answer **any three** of the following. **Each** question carries **14** marks. **(14×3=42)**

7. Determine the amount of claim to be lodged by M/s Arun Company to Insurance Company from the following details :
The company had taken a fire insurance policy for Rs. 1,20,000 covering its stock and the policy was subjected to average clause.

| | 1-10-2017 to 30-9-2018 Rs. | 1-10-2018 to 15-3-2019 Rs. |
|---|---|---|
| Sales | 12,00,000 | 6,96,000 |
| Purchases | 7,90,000 | 4,00,000 |
| Wages and salaries | 1,39,000 | 69,000 |
| Sales return | 56,000 | 16,000 |
| Purchase return | 27,000 | 9,000 |
| Carriage inward | 27,000 | 9,000 |

Date of fire 15-3-2019.

| | |
|---|---|
| Stock on 1-10-2017 | 1,28,700 |
| Stock on 30-9-2018 | 1,89,000 |
| Stock salvaged | 19,000 |

Stocks have been valued at 10% less than cost.

MAHAVEER JAIN FIRST GRADE COLLEGE KGF - 563 122

8. A and B undertook a joint venture for the construction of a college building. A joint bank account was opened into which A and B deposited Rs. 3,00,000 and Rs. 1,00,000 respectively. Profit sharing ratio is 3 : 2.

**Other details were :**

Salaries Rs. 33,000, wages Rs. 1,90,000, building material purchased Rs. 4,10,000, material supplied by A Rs. 36,000, material supplied by B Rs. 35,000, architect fee Rs. 28,000, carriage inward Rs. 44,000, machinery purchased Rs. 90,000 on the completion of construction. A took over unused materials of Rs. 40,000. B was paid a remuneration of Rs. 30,000 for his services. Machinery was sold for Rs. 70,000. Contract price was Rs. 10,60,000 which was duly received. Prepare necessary Ledger A/c.

9. Ragava Batteries of Bangalore consigned 1600 batteries costing Rs. 5,000 each to Manju Electricals of Mysore. The consignor paid Rs. 1,05,000 as freight charges. During transit it was found that 10 batteries were damaged. Consignee received the balance of batteries and incurred Rs. 14,900 as unloading charges. He sold 800 batteries at Rs. 6,500 per unit for cash and 450 batteries on credit at Rs. 7,000 per unit. He spent Rs. 40,000 as godown rent Rs. 6,600 as advertisement and Rs. 30,000 as salesman salary, consignee is entitled to 5% ordinary commission on sales and 2% del-credere commission on credit sales. Consignee does final settlement by cheque payment.

Prepare Consignment Account, Consignee A/c and Abnormal Loss A/c.

10. Belagavi H.O. of a company invoices goods to its Hubli branch at cost plus 25% cash collections of the day is to be remitted to H.O. through a bank a/c and all expenses of the branch are directly paid by H.O.
From the following show the Hubli Branch Account in the books of H.O.

| | |
|---|---|
| Stock on 1-4-2018 (Invoice Price) | 12,500 |
| Debtors on 1-1-2018 | 12,000 |
| Good sent to branch (IP) | 40,000 |
| Cash sales | 16,000 |

| | | | |
|---|---|---|---|
| Cash from debtors | | 29,500 | |
| Goods returned by branch (IP) | | 2,400 | |
| Payments made by H.O. | | | |
| For rent | 3,000 | | |
| For Salary | 11,000 | | |
| For sundry expenses | 510 | 14,510 | |
| Stock on 31-12-2018 (Invoice Price) | | 15,000 | |
| Debtor on 31-12-2018 | | 22,500 | |

11. From the following balances from Prakash Stores prepare Departmental Trading P & L A/c in the columnar form for the year ended 31-3-2019.

| **Particulars** | **Dr. Rs.** | **Cr. Rs.** |
|---|---|---|
| Stock 1-4-2018 : | | |
| Dept. I | 2,40,000 | – |
| Dept. II | 1,80,000 | – |
| Purchases and sales : | | |
| Dept. I | 3,20,000 | 6,00,000 |
| Dept. II | 2,80,000 | 5,60,000 |
| Carriage inwards : | | |
| Dept. I | 8,000 | – |
| Dept. II | 4,000 | – |
| Machinery | 72,000 | – |
| Salaries | 1,20,000 | – |
| Rent | 24,000 | – |
| Repairs to machinery | 60,000 | – |
| Debtors and creditors | 90,000 | 1,20,000 |

SRI ... COLLEGE KGF - 563 122

| | | |
|---|---|---|
| Capital | – | 3,20,000 |
| Cash in hand | 24,000 | – |
| Bills receivable and payable | 30,000 | 12,000 |
| Drawings | 40,000 | – |
| Building | 1,20,000 | – |
| | **16,12,000** | **16,12,000** |

SRI BHAGWAN MAHAVEER JAIN FIRST GRADE COLLEGE KGF - 563 122

**Adjustment :**

a) Stock on 31-3-2019 : Dept. I Rs. 2,80,000, Dept. II Rs. 2,40,000.

b) Salaries to be divided in the ratio of 7 : 3.

c) Value of machinery Dept. I Rs. 40,000, Dept. II Rs. 32,000.

d) Depreciate machinery at 10% and building at 5% p.a.

e) Area occupied in the building 3 : 2 by Dep. I and Dept. II respectively.

### ಕನ್ನಡ ಆವೃತ್ತಿ

### ವಿಭಾಗ – ಎ

ಕೆಳಗಿನ ಯಾವುದಾದರೂ ಐದು ಉಪ-ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿ ಉಪ-ಪ್ರಶ್ನೆಗೆ ಎರಡು ಅಂಕಗಳು. **(5×2=10)**

1. a) ಯಾವಾಗ ಸರಾಸರಿ ಷರತ್ತು ಅನ್ವಯಿಸುತ್ತದೆ ?

b) ಡೆಲ್-ಕ್ರೆಡರ್ ಕಮೀಷನ್ ಎಂದರೇನು ?

c) ಜಂಟಿ ವ್ಯವಹಾರ ಮತ್ತು ಪಾಲುದಾರಿಕೆಗಿರುವ ಯಾವುದಾದರೂ ಎರಡು ವ್ಯತ್ಯಾಸಗಳನ್ನು ತಿಳಿಸಿ.

d) ಹೆಚ್ಚುವರಿ ಬೆಲೆಯ ಅರ್ಥವನ್ನು ಬರೆಯಿರಿ.

e) ಅಸಾಮಾನ್ಯ ವಸ್ತುಗಳು ಎಂದರೇನು ?

f) ವಿಭಾಗೀಯ ಖಾತೆಗಳು ಎಂದರೇನು ?

g) ಸರಕುಗಳನ್ನು ಮಾರಾಟ ಬೆಲೆಯ ಮೇಲೆ 20% ಲಾಭಾದ ದರದಲ್ಲಿ ರವಾನಿಸಿದೆ. ಈ ಸರಕುಗಳ ವೆಚ್ಚ ರೂ. 1,50,000 ಇದ್ದರೆ, ಸರಕುಗಳ ವೆಚ್ಚ ಪಟ್ಟಿ ಬೆಲೆಯಲ್ಲಿ ಸೇರಿಸಬೇಕಿರುವ ಹೇರಿಕೆ (load) ಎಷ್ಟು ಎಂದು ಕಂಡುಹಿಡಿಯಿರಿ.

## ವಿಭಾಗ – ಬಿ

ಕೆಳಗಿನ ಯಾವುದಾದರೂ **ಮೂರು** ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿ ಪ್ರಶ್ನೆಗೆ ಆರು ಅಂಕಗಳು. **(3×6=18)**

2. ದಿನಾಂಕ 30-9-2018 ರಂದು ಬೆಂಗಳೂರು ಸ್ಪೋರ್ಟ್ಸ್ ಹೌಸ್‌ನ ಆವರಣದಲ್ಲಿ ಬೆಂಕಿ ತಗುಲಿತು. ಕೆಳಕಂಡ ವಿವರಗಳಿಂದ ವಿಮಾ ಕಂಪನಿಯೊಂದಿಗಿನ ಕ್ಲೇಮ್‌ಅನ್ನು ಕಂಡುಹಿಡಿಯಿರಿ.

   ಕಂಪನಿಯ ಕೊನೆಯ ಖಾತೆಗಳನ್ನು 31-12-2017 ರಂದು ತಯಾರಿಸಲಾಯಿತು.

   ದಾಸ್ತಾನು 31-12-2017 ರಂದು ರೂ. 1,20,000

   ಇತರೆ ಋಣಿಗಳು 31-12-2017 ರೂ. 3,20,000

   ಇತರೆ ಋಣಿಗಳು 30-9-2018 ರೂ. 2,40,000

   ಋಣಿಗಳಿಂದ ಸ್ವಿಕರಿಸಿದ ಹಣ ರೂ. 12,00,000

   1-1-2018 ರಿಂದ 30-9-2018 ರ ವರೆಗೆ ಖರೀದಿ ರೂ. 10,00,000

   ಮಾರಾಟದ ಮೇಲೆ ಒಟ್ಟು ಲಾಭದ ದರ 25%.

3. ಬೆಂಗಳೂರಿನ ರವಿ ಮೈಸೂರಿನ ಶ್ರೀಕಾಂತ್‌ರವರಿಗೆ 1000 ಕೆ.ಜಿ. ಎಣ್ಣೆಯನ್ನು ಪ್ರತಿ ಕೆ.ಜಿ.ಗೆ ರೂ. 60 ಪ್ರಕಾರ ಸರಕು ಸಾಗಣೆ ಮಾಡಿರುತ್ತಾರೆ. ಅವರು ಸಾರಿಗೆ ಹಾಗೂ ಸರಕು ಸಾಗಣೆಗೆ ರೂ. 10,000 ಕೊಟ್ಟಿರುತ್ತಾರೆ. ಶ್ರೀಕಾಂತ್‌ರವರು ರೂ. 2,000 ಸರಕನ್ನು ಇಳಿಸಿಕೊಳ್ಳಲು ರೂ. 4,000 ಉಗ್ರಾಣದ ಬಾಡಿಗೆಗೆ ಮತ್ತು ರೂ. 3,000 ಮಾರಾಟದ ಖರ್ಚು ಮಾಡುತ್ತಾರೆ. ಸಾಮಾನ್ಯ ನಷ್ಟ 80 ಕೆ.ಜಿ.ಗಳು (ಸೋರಿಕೆ) ಸಾಗಣೆಯಲ್ಲಿ ಶ್ರೀಕಾಂತ್‌ರವರು 680 ಕೆ.ಜಿ. ಎಣ್ಣೆಯನ್ನು ಪ್ರತಿ ಕೆ.ಜಿ.ಗೆ ರೂ. 100 ರ ಪ್ರಕಾರ ಮಾರುತ್ತಾರೆ. ಮಾರಾಟವಾಗದ ಎಣ್ಣೆಯ ಮೌಲ್ಯವನ್ನು ಕಂಡುಹಿಡಿಯಿರಿ.

4. A ಮತ್ತು B ಜಂಟಿಯಾಗಿ ವ್ಯಾಪಾರ ಮಾಡಲು ನಿರ್ಧರಿಸಿ, ಲಾಭ ಮತ್ತು ನಷ್ಟಗಳನ್ನು 2 : 1 ರ ಪ್ರಕಾರ ಹಂಚಿಕೊಳ್ಳಲು ಬಯಸಿದ್ದಾರೆ. ಅವರು ಮೆಮೊರಾಂಡಮ್ ಜಾಯಿಂಟ್ ವೆಂಚರ್ ರೀತಿಯ ಪುಸ್ತಕಗಳನ್ನು ತಯಾರಿಸುತ್ತಾರೆ.

   A ಮತ್ತು B ಅನುಕ್ರಮವಾಗಿ ರೂ. 6,60,000 ಮತ್ತು ರೂ. 4,60,000 ರಷ್ಟು ಸರಕುಗಳನ್ನು ಖರೀದಿಸುತ್ತಾರೆ ಮತ್ತು ಅನುಕ್ರಮವಾಗಿ ರೂ. 7,60,000 ಮತ್ತು ರೂ. 5,40,000 ಗೆ ವಸ್ತುಗಳನ್ನು ಮಾರಾಟ ಮಾಡುತ್ತಾರೆ. ಅವರು ಅನುಕ್ರಮವಾಗಿ ಮಾಡಿದ ಮಾರಾಟ ಖರ್ಚು ರೂ. 25,000 ಮತ್ತು ರೂ. 15,000 ಆಗಿರುತ್ತದೆ. ವ್ಯತ್ಯಾಸದ ಹಣವನ್ನು ಚೆಕ್ ಮೂಲಕ ಪಾವತಿಸಿರುತ್ತಾರೆ. B ಪುಸ್ತಕದಲ್ಲಿ A ಖಾತೆಯನ್ನು ಮತ್ತು ಮೆಮೊರಾಂಡಮ್ ಜಾಯಿಂಟ್ ವೆಂಚರ್ ಖಾತೆಯನ್ನು ತಯಾರಿಸಿ.

SRI BHAGAWAN MAHAVEER JAIN FIRST GRADE COLLEGE
KGF - 563 122

5. A ಕಂಪನಿಯು ತನ್ನ ಕೇಂದ್ರ ಕಛೇರಿಯನ್ನು ಬಾಂಬೆಯಲ್ಲಿ ಹಾಗೂ ಶಾಖೆಯನ್ನು ಮೈಸೂರಿನಲ್ಲಿ ಹೊಂದಿದೆ. ದಿನಾಂಕ 31-3-2019 ರಂದು ಮುಕ್ತಾಯವಾಗುವ ವರ್ಷಕ್ಕೆ ಮೈಸೂರು ಶಾಖೆಯ ವಿವರಗಳನ್ನು ನಿಮಗೆ ನೀಡಲಾಗಿದೆ.

| | | ರೂ. |
|---|---|---|
| ದಿನಾಂಕ 1-4-2018 ರಂದು ಶಾಖೆಯ ದಾಸ್ತಾನು | | 50,000 |
| ದಿನಾಂಕ 1-4-2018 ರಂದು ಶಾಖಾ ಚಿಲ್ಲರೆ ನಗದು | | 200 |
| ಶಾಖೆಗೆ ಕಳುಹಿಸಿದ ಸರಕಿನ ಬೆಲೆ | | 66,000 |
| ಶಾಖೆಯಿಂದ ಹಿಂತಿರುಗಿಸಿದ ಸರಕಿನ ಬೆಲೆ | | 5,600 |
| ಶಾಖೆಯ ನಗದು ಮಾರಾಟ | | 1,20,000 |
| ಶಾಖೆಯ ಖರ್ಚುಗಳಿಗಾಗಿ ಹಣ ರವಾನಿಸಿದ್ದು : | | |
| ಸಂಬಳಗಳು | 18,000 | |
| ಬಾಡಿಗೆ | 4,000 | |
| ಚಿಲ್ಲರೆ ಹಣ | 3,000 | 25,000 |
| ದಿನಾಂಕ 31-3-2019 ರಂದು ಶಾಖೆಯ ದಾಸ್ತಾನು | | 54,000 |
| ದಿನಾಂಕ 31-3-2019 ರಂದು ಶಾಖಾ ಚಿಲ್ಲರೆ ನಗದು | | 600 |

ಕೇಂದ್ರ ಕಛೇರಿಯ ಪುಸ್ತಕದಲ್ಲಿ ಶಾಖೆಯ ಖಾತೆಯನ್ನು ತಯಾರಿಸಿ.

SRI CHAGANAMAL MAHAVEER JAIN FIRST GRADE COLLEGE KGF - 563 122

6. ಒಂದು ಸಂಸ್ಥೆಯಲ್ಲಿ A ಮತ್ತು B ಎಂದು ಎರಡು ವಿಭಾಗಗಳಿವೆ. ಈ ಕೆಳಗಿನ ವಿವರಗಳು 31-3-2018 ಕ್ಕೆ ಮುಕ್ತಾಯವಾಗುವ ವ್ಯವಹಾರ ವರ್ಷಕ್ಕೆ ಸಂಬಂಧಿಸಿದೆ.

| | A | B | ಒಟ್ಟುಮೊತ್ತ |
|---|---|---|---|
| | ರೂ. | ರೂ. | ರೂ. |
| ಪ್ರಾರಂಭಿಕ ದಾಸ್ತಾನು | 6,000 | 9,000 | 15,000 |
| ಖರೀದಿ | 40,000 | 50,000 | 90,000 |
| ಮಾರಾಟ | 80,000 | 1,00,000 | 1,80,000 |
| ಒಳಸಾಗಾಣಿಕೆ | – | – | 4,000 |
| ವಿದ್ಯುತ್‌ಶಕ್ತಿ | – | – | 6,000 |
| ಕೂಲಿ | – | – | 12,000 |
| ಮುಕ್ತಾಯದ ದಾಸ್ತಾನು | 6,000 | 14,000 | 20,000 |

ಕೂಲಿಯನ್ನು 5 : 4 ಅನುಪಾತದಲ್ಲಿ ಮತ್ತು ವಿದ್ಯುತ್ ಶಕ್ತಿಯನ್ನು 1:2 ಅನುಪಾತದಲ್ಲಿ ಕ್ರಮವಾಗಿ A ಮತ್ತು B ವಿಭಾಗಗಳಿಗೆ ಹಂಚಿ, ವಿಭಾಗೀಯ ವ್ಯವಹಾರ ಖಾತೆಯನ್ನು ಲಂಬ ವಿಧಾನದಲ್ಲಿ ತಯಾರಿಸಿ..

ವಿಭಾಗ – ಸಿ

ಕೆಳಗಿನ ಯಾವುದಾದರೂ **ಮೂರು** ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿ ಪ್ರಶ್ನೆಗೆ **ಹದಿನಾಲ್ಕು** ಅಂಕಗಳು. **(14×3=42)**

7. ಈ ಕೆಳಗಿನ ವಿವರಗಳಿಂದ ಮೆ. ಅರುಣ್ ಸಂಸ್ಥೆಯು ವಿಮಾ ಕಂಪನಿಗೆ ಸಲ್ಲಿಸಬೇಕಾದ ವಿಮಾ ಹಕ್ಕಿನ ಮೊತ್ತವನ್ನು ಕಂಡುಹಿಡಿಯಿರಿ. ಸಂಸ್ಥೆಯು ದಾಸ್ತಾನಿನ ರಕ್ಷಣೆಗೋಸ್ಕರ ಬೆಂಕಿ ವಿಮಾ ಪಾಲಿಸಿಯನ್ನು ರೂ. 1,20,000 ಗೆ ತೆಗೆದುಕೊಂಡಿದೆ ಮತ್ತು ಈ ಪಾಲಿಸಿಯು ಸರಾಸರಿ ಕಲಮಿಗೆ ಒಳಪಟ್ಟಿದೆ :

| | **1-10-2017 ರಿಂದ 30-9-2018** | **1-10-2018 ರಿಂದ 15-3-2019** |
|---|---|---|
| | ರೂ. | ರೂ. |
| ಮಾರಾಟ | 12,00,000 | 6,96,000 |
| ಖರೀದಿ | 7,90,000 | 4,00,000 |
| ಕೂಲಿ ಮತ್ತು ವೇತನ | 1,39,000 | 69,000 |
| ಮಾರಾಟ ಹಿಂತಿರುಗಿಸಿರುವುದು | 56,000 | 16,000 |
| ಖರೀದಿ ಹಿಂತಿರುಗಿಸಿರುವುದು | 27,000 | 9,000 |
| ಒಳ ಸಾಗಾಣಿಕೆ | 27,000 | 9,000 |

ಬೆಂಕಿ ಅನಾಹುತ ಸಂಭವಿಸಿದ ದಿನ 15-3-2019.

ದಿನಾಂಕ 1-10-2017 ರಂದು ದಾಸ್ತಾನು ರೂ. 1,28,700

ದಿನಾಂಕ 30-9-2018 ರಂದು ದಾಸ್ತಾನು ರೂ. 1,89,000

ಬೆಂಕಿಯಿಂದ ರಕ್ಷಿಸಿದ ದಾಸ್ತಾನು ರೂ. 19,000

ದಾಸ್ತಾನುಗಳನ್ನು ವೆಚ್ಚ ಬೆಲೆಗಿಂತ 10% ರಷ್ಟು ಕಡಿಮೆ ಬೆಲೆಯಲ್ಲಿ ಮೌಲ್ಯ ಮಾಡಲಾಗಿದೆ.

SRI BHARATHI ... KGF - 563 12?

8. A ಮತ್ತು B ಜಂಟಿ ವ್ಯಾಪಾರ ಒಪ್ಪಂದವನ್ನು ಮಾಡಿಕೊಂಡು ಒಂದು ಜಂಟಿ ಬ್ಯಾಂಕ್ ಖಾತೆಯನ್ನು ತೆರೆದರು. ಜಂಟಿ ವ್ಯಾಪಾರದ ಒಡಂಬಡಿಕೆ ಕಾಲೇಜಿನ ಕಟ್ಟಡವನ್ನು ಕಟ್ಟುವುದಾಗಿತ್ತು. ಜಾಯಿಂಟ್ ಬ್ಯಾಂಕ್ ಖಾತೆಗೆ A ಮತ್ತು B ತಲಾ ರೂ. 3,00,000 ಮತ್ತು ರೂ. 1,00,000 ತುಂಬಿದರು. ಲಾಭ ಮತ್ತು ನಷ್ಟವನ್ನು 3 : 2 ರಂತೆ ಹಂಚಿಕೊಳ್ಳುತ್ತಾರೆ.

ಇತರೆ ವಿವರಗಳು ಹೀಗಿವೆ :

ಸಂಬಳ ರೂ. 33,000, ಕೂಲಿ ರೂ. 1,90,000, ಕೊಂಡ ಸರಕುಗಳು ರೂ. 4,10,000, A ಪೂರೈಸಿದ ಸರಕುಗಳು ರೂ. 36,000, B ಪೂರೈಸಿದ ಸರಕುಗಳು ರೂ. 35,000, ಆರ್ಕಿಟೆಕ್ಟ್ ಫೀ ರೂ. 28,000, ಒಳಸಾರಿಗೆ ರೂ. 44,000, ಯಂತ್ರ ಖರೀದಿ ರೂ. 90,000. ಕಾಲೇಜು ಕಟ್ಟಡವನ್ನು ಪೂರೈಸಿದ ನಂತರ ಉಳಿದ ಸರಕುಗಳನ್ನು A ರೂ. 40,000 ಗಳಿಗೆ ತೆಗೆದುಕೊಂಡು ಹೋಗುತ್ತಾನೆ. B ಗೆ ರೂ. 30,000 ನ್ನು ಆತನ ಸೇವೆಗೆ ಸಂಭಾವನೆಯಾಗಿ ಕೊಡಲಾಗಿರುತ್ತದೆ. ಯಂತ್ರವನ್ನು ರೂ. 70,000. ಕ್ಕೆ ಮಾರಲಾಯಿತು. ಕರಾರಿನ ನಿಗದಿತ ಮೊತ್ತ ರೂ. 10,60,000 ವನ್ನು ಕೆಲಸ ಪೂರೈಸಿದ್ದರಿಂದ ಪಡೆಯಲಾಯಿತು. ಅವಶ್ಯವಿರುವ ಖಾತೆಗಳನ್ನು ತಯಾರಿಸಿ.

9. ಬೆಂಗಳೂರಿನ ರಾಘವ ಬ್ಯಾಟರಿ ಸಂಸ್ಥೆಯು ಮೈಸೂರಿನ ಮಂಜು, ಎಲೆಕ್ಟ್ರಿಕಲ್ಸ್‌ಗೆ 1600 ಬ್ಯಾಟರಿಗಳನ್ನು ಪ್ರತಿ ಬ್ಯಾಟರಿಗೆ ರೂ. 5,000 ದಂತೆ ಸರಕು ಸಾಗಣೆ ಮಾರಾಟದಲ್ಲಿ ಕಳುಹಿಸಿತು. ಅವರು ರೂ. 1,05,000 ಸಾಗಣೆ ಖರ್ಚು ಪಾವತಿಸಿದರು. ಸಾಗಾಣೆಯಲ್ಲಿ 10 ಬ್ಯಾಟರಿಗಳು ಹಾಳಾಗಿರುವುದು ತಿಳಿಯಿತು. ಮಂಜು ಎಲೆಕ್ಟ್ರಿಕಲ್ಸ್ ಉಳಿದ ಬ್ಯಾಟರಿಗಳನ್ನು ಪಡೆದು ರೂ. 14,900 ನ್ನು ಇಳಿಸುವ ಖರ್ಚು ಮಾಡಿದರು. ಅವರು 800 ಬ್ಯಾಟರಿಗಳನ್ನು ಪ್ರತಿ ಬ್ಯಾಟರಿಗೆ ರೂ. 6,500 ರ ಪ್ರಕಾರ ನಗದಿಗೆ ಮತ್ತು 450 ಬ್ಯಾಟರಿಗಳನ್ನು ಪ್ರತಿ ಬ್ಯಾಟರಿಗೆ ರೂ. 7,000 ಪ್ರಕಾರ ಸಾಲಕ್ಕೆ ಮಾರಿದರು. ಅವರು ರೂ. 40,000 ಉಗ್ರಾಣದ ಬಾಡಿಗೆಗಾಗಿ ರೂ. 6,600 ನ್ನು ಪ್ರಚಾರಕ್ಕಾಗಿ ಮತ್ತು ರೂ. 30,000 ನ್ನು ಮಾರಾಟಗಾರರ ಸಂಬಳಕ್ಕಾಗಿ ಪಾವತಿಸಿದರು. ಅವರಿಗೆ ಸಾಮಾನ್ಯ ಕಮೀಷನ್ 5% ರಂತೆ ಮಾರಾಟದ ಮೌಲ್ಯದ ಮೇಲೆ ಮತ್ತು 2% ಕಮೀಷನ್ ಸಾಲದ ಮಾರಾಟದ ಮೇಲೆ ಡೆಲ್‌ಕ್ರೆಡರ್ ಕಮೀಷನ್ ಪಡೆಯುವ ಹಕ್ಕಿದೆ. ಮಂಜು ಎಲೆಕ್ಟ್ರಿಕಲ್‌ರವರು ಉಳಿದ ಹಣವನ್ನು ಚೆಕ್ ಮೂಲಕ ಪಾವತಿಸಿದರು.

ಕನ್‌ಸೈನ್‌ಮೆಂಟ್ ಖಾತೆ, ಕನ್‌ಸೈನೀ ಖಾತೆ ಮತ್ತು ಅಸಾಮಾನ್ಯ ನಷ್ಟ ಖಾತೆಯನ್ನು ತಯಾರಿಸಿ..

10. ಬೆಳಗಾವಿಯಲ್ಲಿ ಕೇಂದ್ರ ಕಛೇರಿಯಿರುವ ಒಂದು ಸಂಸ್ಥೆಯು ತನ್ನ ಹುಬ್ಬಳ್ಳಿ ಶಾಖೆಗೆ ಸರಕುಗಳನ್ನು ವೆಚ್ಚದ ಮೇಲೆ 25% ಮಾರಾಟ ಪಟ್ಟಿ ಬೆಲೆಯಲ್ಲಿ ಕಳುಹಿಸುತ್ತದೆ. ಶಾಖೆಯು ಪ್ರತಿ ದಿನದ ನಗದು ಸಂಗ್ರಹಣೆಯನ್ನು ಬ್ಯಾಂಕ್ ಖಾತೆಯ ಮುಖಾಂತರ ಸಂದಾಯ ಮಾಡುತ್ತದೆ. ಮತ್ತು ಶಾಖೆಯ ಎಲ್ಲಾ ವೆಚ್ಚಗಳನ್ನು ಕೇಂದ್ರ ಕಛೇರಿಯು ನೇರವಾಗಿ ಪಾವತಿಸುತ್ತದೆ.

ಈ ಕೆಳಗೆ ಕೊಟ್ಟಿರುವ ವಿವರಗಳಿಂದ ಹುಬ್ಬಳ್ಳಿ ಶಾಖೆಯನ್ನು ಕೇಂದ್ರ ಲೆಕ್ಕ ಪುಸ್ತಕದಲ್ಲಿ ಬರೆಯಿರಿ.

| | |
|---|---|
| ದಾಸ್ತಾನು 1-4-2018 ರಂದು (IP) | 12,500 |
| ಶಾಖಾ ಋಣಿಗಳು 1-1-2018 ರಂದು | 12,000 |

| | | |
|---|---|---|
| ಶಾಖೆಗೆ ಮಾರಾಟ ಬೆಲೆಯಲ್ಲಿ ಸರಕು ರವಾನಿಸಿದ್ದು (IP) | | 40,000 |
| ನಗದು ಮಾರಾಟ | | 16,000 |
| ಶಾಖೆಯು ಋಣಿಗಳಿಂದ ಸ್ವಿಕರಿಸಿದ ನಗದು | | 29,500 |
| ಶಾಖೆಯು ಸರಕುಗಳನ್ನು ಹಿಂತಿರುಗಿಸಿದ್ದು (IP) | | 2,400 |
| ಕೇಂದ್ರ ಕಛೇರಿಯು ಖರ್ಚುಗಳಿಗೆ ರವಾನಿಸಿದ್ದು : | | |
| ಬಾಡಿಗೆಗಾಗಿ | 3,000 | |
| ಸಂಬಳಕ್ಕಾಗಿ | 11,000 | |
| ಇತರೆ ಖರ್ಚುಗಳು | 510 | 14,510 |
| ದಾಸ್ತಾನು 31-12-2018 (IP) | | 15,000 |
| ಶಾಖಾ ಋಣಿಗಳು 31-12-2018 | | 22,500 |

11. ಪ್ರಕಾಶ್ ಸ್ಟೋರ್ಸ್ ಪುಸ್ತಕಗಳಿಂದ ಈ ಕೆಳಕಂಡ ವಿವರಗಳನ್ನು ಪಡೆಯಲಾಗಿದೆ. 31-3-2019 ಕ್ಕೆ ವರ್ಷ ಕೊನೆಗೊಳ್ಳುವಂತೆ ವಿಭಾಗೀಯ ಟ್ರೇಡಿಂಗ್ ಮತ್ತು ಲಾಭ ಮತ್ತು ನಷ್ಟ ಖಾತೆಯನ್ನು ಲಂಬ ವಿಧಾನದಲ್ಲಿ ತಯಾರಿಸಿ.

| ವಿವರಗಳು | ಋಣಿ<br>ರೂ. | ಧಣಿ<br>ರೂ. |
|---|---|---|
| 1-4-2018 ರ ಸರಕುಗಳು : | | |
| ವಿಭಾಗ I | 2,40,000 | – |
| ವಿಭಾಗ II | 1,80,000 | – |
| ಖರೀದಿ ಮತ್ತು ಮಾರಾಟ : | | |
| ವಿಭಾಗ I | 3,20,000 | 6,00,000 |
| ವಿಭಾಗ II | 2,80,000 | 5,60,000 |
| ಒಳ ಸಾರಿಗೆ ಖರ್ಚು : | | |
| ವಿಭಾಗ I | 8,000 | – |
| ವಿಭಾಗ II | 4,000 | – |
| ಯಂತ್ರೋಪಕರಣಗಳು | 72,000 | – |
| ಸಂಬಳ | 1,20,000 | – |

SRI BHAGAWAN MAHAVEER JAIN FIRST GRADE COLLEGE KGF - 563 122

| | | |
|---|---|---|
| ಬಾಡಿಗೆ | 24,000 | – |
| ಯಂತ್ರೋಪಕರಣಗಳ ರಿಪೇರಿ | 60,000 | – |
| ಋಣಿಗಳು ಮತ್ತು ಧಣಿಗಳು | 90,000 | 1,20,000 |
| ಬಂಡವಾಳ | – | 3,20,000 |
| ಕೈಯಲ್ಲಿನ ನಗದು | 24,000 | – |
| ಹುಂಡಿಗಳು | 30,000 | 12,000 |
| ಹಿಂಪಡೆತ | 40,000 | – |
| ಕಟ್ಟಡಗಳು | 1,20,000 | – |
| | **16,12,000** | **16,12,000** |

MAHAVEER JAIN FIRST GRADE COLLEGE KGF - 563 122

**ಇತರೆ ಮಾಹಿತಿ :**

a) 31-3-2019 ರಂದು ಸರಕು : ವಿಭಾಗ I ರೂ. 2,80,000, ವಿಭಾಗ II ರೂ. 2,40,000.

b) 7 : 3 ರ ಅನುಪಾತದಲ್ಲಿ ಸಂಬಳವನ್ನು ವಿಭಾಗೀಕರಿಸಬೇಕು.

c) ಯಂತ್ರಗಳ ಮೌಲ್ಯ ವಿಭಾಗ I ರೂ. 40,000 ಮತ್ತು ವಿಭಾಗ II ರೂ. 32,000.

d) ಯಂತ್ರಗಳನ್ನು ವಾರ್ಷಿಕ ಶೇ. 10 ರಂತೆ ಮತ್ತು ಕಟ್ಟಡವನ್ನು ವಾರ್ಷಿಕ ಶೇ. 5 ರಂತೆ ಸವಕಳಿ ಮಾಡಿರಿ.

e) ಕಟ್ಟಡದಲ್ಲಿ ವಿಭಾಗ I ಮತ್ತು ವಿಭಾಗ II 3 : 2 ರಷ್ಟು ಜಾಗವನ್ನು ಆಕ್ರಮಿಸಿದೆ.

---